ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	212
ಸದಸ್ಯರ ಹೆಸರು	ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)
ಉತ್ತರಿಸಬೇಕಾದ ದಿನಾಂಕ	14.12.2021
ಉತ್ತರಿಸುವ ಸಚಿವರು	ಗಣಿ ಮತ್ತು ಭೂವಿಜ್ಞಾನ ಹಾಗೂ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಮತ್ತು ವಿಕಲಚೇತನರ, ಹಿರಿಯ ನಾಗರಿಕರ ಸಬಲೀಕರಣ ಸಚಿವರು.

ಕ್ರ. ಸಂ.	ಪ್ರಶ್ನೆ	ಉತ್ತರ
ಅ)	ಉಡುಪಿ ಜಿಲ್ಲೆಯಲ್ಲಿ ಕಾರ್ಯನಿರ್ವವಹಿಸುತ್ತಿರುವ ಕೆಂಪುಕಲ್ಲಿನ ಮತ್ತು ಶಿಲೆಕಲ್ಲಿನ ಗಣಿಗಾರಿಕೆಗಳ ಸಂಖ್ಯೆ ಎಷ್ಟು; ಅವುಗಳಲ್ಲಿ ಇಲಾಖಾ ಪರವಾನಗಿ ಪಡೆದ ಗಣಿಗಾರಿಕೆಗಳ ಸಂಖ್ಯೆ ಎಷ್ಟು; ಸರ್ಕಾರಿ ಸ್ಥಳದಲ್ಲಿ ಹಾಗೂ ಖಾಸಗಿಯವರ ಸ್ಥಳದಲ್ಲಿ ನಡೆಸಲಾಗುತ್ತಿರುವ ಗಣಿಗಾರಿಕೆಗಳ ಸಂಖ್ಯೆ ಎಷ್ಟು; (ಗಣಿಗಾರಿಕೆವಾರು, ತಾಲ್ಲೂಕುವಾರು ಮಾಹಿತಿಯನ್ನು ನೀಡುವುದು)	ಉಡುಪಿ ಜಿಲ್ಲೆಯಲ್ಲಿ 125 ಶಿಲೆ ಕಲ್ಲುಗಣಿ ಗುತ್ತಿಗೆ ಮತ್ತು 01 ಕೆಂಪುಕಲ್ಲು ಗಣಿ ಗುತ್ತಿಗೆ ಚಾಲ್ತಿಯಲ್ಲಿರುತ್ತವೆ. ಕರ್ನಾಟಕ ಉಪಖನಿಜ ರಿಯಾಯಿತಿ (ತಿದ್ದುಪಡಿ) ನಿಯಮಗಳು, 2016 ಹಾಗೂ (ತಿದ್ದುಪಡಿ) ನಿಯಮಗಳು, 2020 ರ ನಿಯಮ 3-A(b) ರಂತೆ ಪಟ್ಟಾ ಜಮೀನುಗಳನ್ನು ಕೃಷಿ ಯೋಗ್ಯ ಜಮೀನುಗಳನ್ನಾಗಿ ಅಭಿವೃದ್ಧಿಪಡಿಸುವ ಸಂಬಂಧ ಲ್ಯಾಟರೈಟ್ ತೆರವುಗೊಳಿಸಲು 17 ಕಾರ್ಯಾದೇಶಗಳನ್ನು ನೀಡಲಾಗಿರುತ್ತದೆ. **ತಾಲ್ಲೂಕುವಾರು, ಗಣಿವಾರು ವಿವರಗಳನ್ನು ಅನುಬಂಧ-01 ಮತ್ತು 02 ರಲ್ಲಿ ನೀಡಲಾಗಿದೆ.**
ಆ)	ಉಡುಪಿ ಜಿಲ್ಲೆಯಲ್ಲಿ ಸ್ಥಗಿತಗೊಳಿಸಲಾದ ಕೆಂಪುಕಲ್ಲಿನ ಮತ್ತು ಶಿಲೆಕಲ್ಲಿನ ಗಣಿಗಾರಿಕೆಗಳು ಯಾವುವು; ಅವುಗಳು ಪ್ರಸ್ತುತ ಯಾವ ಸ್ಥಿತಿಯಲ್ಲಿವೆ; ಈ ಗಣಿಗಳು ಮುಚ್ಚಲ್ಪಡದೇ ಮತ್ತು ಆವರಣ ನಿರ್ಮಿಸದೇ ಅಪಾಯಕಾರಿ ಸ್ಥಿತಿಯಲ್ಲಿರುವುದರ ಕುರಿತು ಇಲಾಖೆಯಿಂದ ಕೈಗೊಂಡ ಕ್ರಮವೇನು; (ಪರವಾನಿಗೆದಾರರ ಮೇಲೆ ದಾಖಲಿಸಿದ ದೂರುಗಳ ಪ್ರತಿಯನ್ನು ಒದಗಿಸುವುದು)	ಉಡುಪಿ ಜಿಲ್ಲೆಯಲ್ಲಿ ಮಂಜೂರಾಗಿ ಚಾಲ್ತಿಯಲ್ಲಿರುವ ಕಲ್ಲುಗಣಿ ಗುತ್ತಿಗೆಗಳು ಮತ್ತು ಸ್ಥಗಿತಗೊಂಡಿರುವ ವಿವರ ಕೆಳಕಂಡಂತಿದೆ: (see table below) ಸದರಿ ಕಲ್ಲುಗಣಿ ಗುತ್ತಿಗೆಗಳ ಸುತ್ತಲೂ ತಂತಿ ಬೇಲಿ ನಿರ್ಮಿಸಲಾಗಿದ್ದು, ಯಾವುದೇ ಅಪಾಯಕಾರಿ ಸ್ಥಿತಿಯಲ್ಲಿರುವುದು ಕಂಡುಬಂದಿರುವುದಿಲ್ಲ.

ಕ್ರ. ಸಂ	ಖನಿಜದ ವಿಧ	ಕಾರ್ಯನಿರತ ಗುತ್ತಿಗೆ / ಕಾರ್ಯಾದೇಶಗಳ ಸಂಖ್ಯೆ	ಸ್ಥಗಿತ ಗೊಂಡಿರುವ ಗುತ್ತಿಗೆ / ಕಾರ್ಯಾದೇಶಗಳ ಸಂಖ್ಯೆ
1	ಶಿಲೆ ಕಲ್ಲು	110	15
2	ಕೆಂಪುಕಲ್ಲು	1	0
3	ಲ್ಯಾಟರೈಟ್ (ನಿಯಮ 3-A(b)ರಂತೆ ನೀಡಿರುವ ಕಾರ್ಯಾದೇಶಗಳು)	17	0